## 2017 ಕ.ತೀ.ವ 335

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕಲ್ ಖುನ್ಹ

**ಶ್ರೀ ಸಿ. ಕೃಷ್ಣಮೂರ್ತಿ –ವಿರುದ್ಧ– ಕರ್ನಾಟಕ ರಾಜ್ಯ (ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಂದ ಪ್ರತಿನಿಧಿತ) ಮತ್ತು ಇತರರು***

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**ಎದುರುದಾರರು ನೀಡಿದ ತನಿಖಾ ವರದಿಯನ್ನು ರದ್ದುಗೊಳಿಸುವಂತೆ ಕೋರಿ ಸದರಿ ರಿಟ್ ಅರ್ಜಿ ಸಲ್ಲಿಕೆ.**

**ಉಪ ಲೋಕಾಯುಕ್ತರು ಶಿಸ್ತು ಪಾಲನಾ ಪ್ರಾಧಿಕಾರಕ್ಕೆ ಪ್ರಕರಣವನ್ನು ಶಿಫಾರಸ್ಸು ಮಾಡಬಹುದಾದ ಅಧಿಕಾರವಿದೆಯೇ ವಿನಃ ಅಂತಿಮ ಆದೇಶವನ್ನು ನೀಡುವ ಅಧಿಕಾರವಿರುವುದಿಲ್ಲವೆಂಬ ಅಂಶವನ್ನು ಎತ್ತಿ ಹಿಡಿದ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ವಿಲೇಖಿಸಲಾಗಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆ*** | ***ಪ್ಯಾರಾದಲ್ಲಿ*** |
|---|---|
| *1. ಐಎಲ್ಆರ್ 2015 ಕೆಎಆರ್ 1615 ಕೆಪಿಟಿಸಿಎಲ್ –ವಿರುದ್ಧ– ಜವರಾಯ್ ಗೌಡ ಹಾಗೂ ಇನ್ನೊಬ್ಬರು* | *(ಉಲ್ಲೇ) 4* |

ಅರ್ಜಿದಾರರ ಪರ: ಶ್ರೀ ಎಚ್.ಸಿ. ಶಿವರಾಮು, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಸರ್ಕಾರಿ ವಕೀಲರಿಗೆ ನೋಟೀಸು ನೀಡಲಾಗಿದೆ.

*ರಿಟ್ ಅರ್ಜಿ ಸಂಖ್ಯೆ: 1831/2017 (ಜಿಎಂ–ಕೆಎಲ್ಎ), ದಿನಾಂಕ: 25ನೇ ಜನವರಿ, 2017.

## ಆಜ್ಞೆ

**ನ್ಯಾಯಮೂರ್ತಿ ಎಚ್.ಜಿ. ರಮೇಶ್ (ಮೌಖಿಕ):**

1. ಈ ರಿಟ್ ಅರ್ಜಿಯಲ್ಲಿ, ಬೆಂಗಳೂರಿನ ಕರ್ನಾಟಕ ಲೋಕಾಯುಕ್ತದ ಅಡಿಷನಲ್ ರಿಜಿಸ್ಟ್ರಾರ್ ಆಫ್ ಎನ್‌ಕ್ವೈರಿ – 10 ರವರಿಂದ ಸಲ್ಲಿಸಲಾದ ದಿನಾಂಕ 26.10.2016ರ ವಿಚಾರಣಾ ವರದಿಯನ್ನು (ಅನುಬಂಧ – ಪಿ) ರದ್ದುಪಡಿಸಲು ಮತ್ತು ಕರ್ನಾಟಕ ರಾಜ್ಯದ ಉಪಲೋಕಾಯುಕ್ತರ ದಿನಾಂಕ 04.11.2016ರ ಶಿಫಾರಸನ್ನು (ಅನುಬಂಧ–ಕ್ಯೂ) ಸಹ ರದ್ದುಪಡಿಸಲು ಅರ್ಜಿದಾರನು ಕೋರಿದ್ದಾನೆ.

2. ಅರ್ಜಿದಾರನನ್ನು ಈ ಮುಂದಿನ ಆರೋಪದ ಮೇಲೆ ಶಿಸ್ತು ವಿಚಾರಣೆಗೆ ಒಳಪಡಿಸಲಾಗಿತ್ತು:

> ಶ್ರೀ ಕೃಷ್ಣಮೂರ್ತಿ, ಡಿಜಿಓ – ಇವರು ದಾವಣಗೆರೆಯ ಕರ್ನಾಟಕ ಗೃಹ ಮಂಡಲಿಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್‌ರಾಗಿ ಕಾರ್ಯ ನಿರ್ವಹಿಸುತ್ತಿರುವಾಗ, ಕುಂದವಾಡ ಗ್ರಾಮದಲ್ಲಿ ಪ್ರತಿ ಎಕರೆಗೆ ರೂ.5 ಲಕ್ಷಗಳ ಮೌಲ್ಯವನ್ನು ನಿಗದಿಪಡಿಸಿ, 360 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚಿಸಿರುತ್ತಾರೆ. ಆದರೆ ಜಮೀನು ಮಾಲೀಕರುಗಳಿಗೆ ನಿಗದಿತ ನಷ್ಟ ಪರಿಹಾರವನ್ನು ನೇರವಾಗಿ ಪಾವತಿಸದೆ, ಡಿಜಿಓ ರವರು ನಷ್ಟ ಪರಿಹಾರಕ್ಕೆ ಅರ್ಹರಾದ ಭೂ ಮಾಲೀಕರುಗಳನ್ನು ಬೆಂಗಳೂರಿಗೆ ಬರುವಂತೆ ಮಾಡುವಲ್ಲಿ ಸಫಲರಾಗಿದ್ದಾರೆ ಮತ್ತು ಬೆಂಗಳೂರಿನ ಆನಂದರಾವ್ ವೃತ್ತದಲ್ಲಿನ ಕಾರ್ಪೋರೇಷನ್ ಬ್ಯಾಂಕ್‌ನ ಚೆಕ್‌ಗಳಿಗೆ ಭೂ ಮಾಲೀಕರ ಸಹಿಗಳನ್ನು ಹಾಕಿಸಿಕೊಂಡು, ಪ್ರತಿ ಎಕರೆಗೆ ರೂ.5,00,000/–ಗಳ ಬದಲಿಗೆ ರೂ.4,10,000/–ಗಳ ನಷ್ಟ ಪರಿಹಾರವನ್ನು ಪಾವತಿಸಲು ಕಾರಣರಾಗಿದ್ದಾರೆ ಮತ್ತು ಹೀಗಾಗಿ, ಅವರು ತಮ್ಮ ಕರ್ತವ್ಯ ಪ್ರಜ್ಞೆಯ ಜೊತೆಗೆ ಸಂಪೂರ್ಣವಾಗಿ ಪ್ರಾಮಾಣಿಕತೆಯನ್ನು ಉಳಿಸಿಕೊಳ್ಳುವಲ್ಲಿ

ವಿಫಲರಾಗಿ, ಭೂ ಸ್ವಾಧೀನ ಹೊಂದಿದ ಹಲವರು ಭೂ ಮಾಲೀಕರಿಗೆ ನಷ್ಟವನ್ನುಂಟು ಮಾಡಿದ್ದಾರೆ ಹಾಗೂ ಇದರಿಂದ, ಕರ್ನಾಟಕ ಸಿವಿಲ್ ಸೇವಾ (ನಡಾವಳಿ) ನಿಯಮಗಳು, 1966ರ 3(1)(i) ರಿಂದ (iii)ರ ವರೆಗಿನ ನಿಯಮಗಳಡಿ ಅವರು ದುರ್ವರ್ತನೆ ಎಸಗಿದ್ದಾರೆಂದು ಆರೋಪಿಸಲಾಗಿದೆ.

ದಿನಾಂಕ 26.10.2016ರ (ಅನುಬಂಧ – ಪಿ) ವಿಚಾರಣಾ ವರದಿಯ ಅನುಸಾರ, ಆರೋಪವು ಸಾಬೀತಾಗಿದೆಯೆಂದು ವಿಚಾರಣಾಧಿಕಾರಿಯು ಅಭಿಪ್ರಾಯಪಟ್ಟಿದ್ದಾರೆ. ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಪರಿಗಣಿಸಿದ ನಂತರ, ದಿನಾಂಕ 4.11.2016ರ ಅನುಬಂಧ–ಕ್ಯೂ ಅನುಸಾರ ಈ ಮುಂದಿನಂತೆ ಶಿಫಾರಸು ಮಾಡಿದ್ದಾರೆ:

"\. . . . . . . . . . . . . . . . . . . . . . . . . . . . . . . . . . . . . . . . . . . . . . . . .

9. ಆದುದರಿಂದ, ವಿಚಾರಣಾಧಿಕಾರಿಯ ನಿರ್ಣಯಗಳನ್ನು ಪರಿಗಣಿಸಿ ಹಾಗೂ ಡಿಜಿಓ ವಿರುದ್ಧ ಆಪಾದಿಸಲಾದ ದುರ್ನಡತೆಯ ಸ್ವರೂಪ ಮತ್ತು ಪ್ರಮಾಣಪತ್ರವನ್ನು ಗಮನದಲ್ಲಿಟ್ಟುಕೊಂಡು, ಡಿಜಿಓ *ಶ್ರೀ ಕೃಷ್ಣಮೂರ್ತಿ, ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಚೇರಿ, ದಾವಣಗೆರೆ* ಇವರಿಗೆ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಹಾಗೂ ಅಪೀಲು) ನಿಯಮಗಳು, 1957ರ 8 (viii) ನಿಯಮದಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ, 'ಸೇವೆಯಿಂದ ವಜಾ' ಮಾಡುವ ಶಿಕ್ಷೆಯನ್ನು ನೀಡಲಾಗಿದೆ.

10. ಅಷ್ಟೇ ಅಲ್ಲದೆ, ಒಂದು ವೇಳೆ ಡಿಜಿಓ ಮೇಲೆ ಕಾನೂನು ಕ್ರಮ ಕೈಗೊಳ್ಳದಿದ್ದಲ್ಲಿ, ಅವನು ರೈತರನ್ನು ಮೋಸಗೊಳಿಸಿದ್ದಕ್ಕಾಗಿ

ಕ್ರಮ ಕೈಗೊಳ್ಳಬಹುದಾಗಿದೆ ಹಾಗೂ ಹಣದ ವಸೂಲಿಗಾಗಿ ಕ್ರಮಗಳನ್ನು ಕೈಗೊಳ್ಳಲಾಗುವುದು.

11. ಸದರಿ ವಿಷಯದಲ್ಲಿ ಕೈಗೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸಬೇಕಾಗಿರುತ್ತದೆ.

ಸಂಬಂಧಿತ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ."

3. ಅರ್ಜಿದಾರನ ಪರ ಹಾಜರಾದ ಮಾನ್ಯ ವಕೀಲ ಶ್ರೀ ಎಚ್.ಸಿ. ಶಿವರಾಮುರವರ ವಾದವನ್ನು ನಾವು ಆಲಿಸಿದ್ದೇವೆ ಮತ್ತು ದಾಖಲೆಯನ್ನು ಅವಗಾಹಿಸಿದ್ದೇವೆ. ಉಪಲೋಕಾಯುಕ್ತರ ಶಿಫಾರಸು ಬಹುತೇಕ ಅಂತಿಮ ಆದೇಶದಂತೆಯೇ ಇದೆ, ಮತ್ತು ಆದುದರಿಂದ, ಅದು ಕಾನೂನಿನಲ್ಲಿ ಸಮರ್ಥನೀಯವಾಗಿಲ್ಲವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

4. ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 14–ಎ(2)(ಡಿ) ನಿಯಮದ ಅನುಸಾರ ಉಪಲೋಕಾಯುಕ್ತರು ಶಿಫಾರಸು ಮಾಡಿದ್ದಾರೆ; ನಿಯಮವನ್ನು ಈ ಮುಂದಿನಂತೆ ಓದಲಾಗುತ್ತದೆ:

> "14–ಎ(2)(ಡಿ) ವಿಚಾರಣೆ ಪೂರ್ಣವಾದ ನಂತರ, ವಿಚಾರಣಾಧಿಕಾರಿಯು ನಿರ್ಣಯಗಳೊಂದಿಗೆ ಹಾಗೂ ಲೋಕಾಯುಕ್ತರ ಅಥವಾ ಸಂದರ್ಭಾನುಸಾರ ಉಪಲೋಕಾಯುಕ್ತರ ಶಿಫಾರಸಿನೊಂದಿಗೆ ಮೊಕದ್ದಮೆಯ ದಾಖಲೆಯನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು".

ಮೇಲೆ ಉದ್ಧೃತಗೊಳಿಸಲಾದ ನಿಯಮವನ್ನೇ ಹೋಲುವ ವಿನಿಯಮವನ್ನು ಪರಿಗಣಿಸಿ, ಈ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 23485/2015

(ದಿನಾಂಕ 24.11.2016)ರಲ್ಲಿ ಉಪ ಲೋಕಾಯುಕ್ತರು ಮೊಕದ್ದಮೆಯ ದಾಖಲೆ ಹಾಗೂ ವಿಚಾರಣಾಧಿಕಾರಿಯ ನಿರ್ಣಯಗಳೊಂದಿಗೆ ತನ್ನ ಶಿಫಾರಸ್ಸನ್ನು ಶಿಸ್ತು ಪ್ರಾಧಿಕಾರಕ್ಕೆ ಕಳುಹಿಸಬೇಕೆಂದು ಅಗತ್ಯಪಡಿಸಲಾಗಿದೆಯೆಂದು ತೀರ್ಮಾನಿಸಲಾಗಿದೆ. ಸದರಿ ತೀರ್ಪಿನಲ್ಲಿ, ***ಕೆಪಿಟಿಸಿಎಲ್ –ವಿರುದ್ಧ– ಜವರಾಯ್ ಗೌಡ ಹಾಗೂ ಇನ್ನೊಬ್ಬರು***[1], ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪು ಅಜಾಗರೂಕತೆಯಿಂದ ಕೂಡಿದ್ದಾಗಿದೆಯೆಂದು ಅಭಿಪ್ರಾಯಪಡಲಾಗಿದೆ. ಅಷ್ಟೇ ಅಲ್ಲದೆ, ಶಿಸ್ತು ಪ್ರಾಧಿಕಾರಕ್ಕೆ ತನ್ನದೇ ಆದ ನಿರ್ಣಯಗಳನ್ನು ದಾಖಲಿಸಲು ಕಾರಣಗಳನ್ನು ನೀಡುವ ಮೂಲಕ ವಿಚಾರಣಾಧಿಕಾರಿಯು ದಾಖಲಿಸಿದ ನಿರ್ಣಯಗಳನ್ನು ಮತ್ತು/ಅಥವಾ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪದಿರುವ ಸ್ವಾತಂತ್ರ್ಯವಿದೆಯೆಂದು ಸದರಿ ತೀರ್ಪಿನಲ್ಲಿ ಹೇಳಲಾಗಿದೆ. ಮೇಲೆ ಉದ್ಧೃತಗೊಳಿಸಲಾದ ನಿಯಮದ ಮೇರೆಗೆ ನೀಡಲಾದ ಶಿಫಾರಸನ್ನು ಕಾನೂನಿನ ಯಾವುದೇ ಉಪಬಂಧದಡಿಯಲ್ಲಿ ಅಂತಿಮವೆಂದು ಘೋಷಿಸಿಲ್ಲ. ಆದುದರಿಂದ, ಉಪಲೋಕಾಯುಕ್ತರ ಶಿಫಾರಸು ಈ ವಿಷಯದಲ್ಲಿ ಅಂತಿಮ ಆದೇಶವೆಂಬ ಅರ್ಜಿದಾರನ ಗ್ರಹಿಕೆಯು ಸರಿಯಲ್ಲ. ವಿಷಯವನ್ನು ಪರಿಗಣಿಸುವುದು ಹಾಗೂ ಅಂತಿಮ ಆದೇಶವನ್ನು ಮಾಡುವುದು ಶಿಸ್ತು ಪ್ರಾಧಿಕಾರಕ್ಕೆ ಸಂಬಂಧಪಟ್ಟದ್ದಾಗಿದೆ. ಈ ಅಭಿಪ್ರಾಯದೊಂದಿಗೆ ರಿಟ್ ಅರ್ಜಿಯನ್ನು ವಿಲೆ ಮಾಡಲಾಗಿದೆ.

---

1. ಐಎಲ್‌ಆರ್ 2015 ಕೆಎಆರ್ 1615